## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* **119/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಕೆಂಡಗಣ್ಣ | *ಪ್ರಮಾಣ ಮಾಡಿಸಿದ ದಿನಾಂಕಃ* | |
| **ತಂದೆ/ಗಂಡನ ಹೆಸರು** | ಃ ಶ್ರೀ ಜವರನಾಯಕ | **31.07.2024** | |
| **ವಯಸ್ಸು** | ಃ **27** **ವರ್ಷ** | | |
| **ವೃತ್ತಿ** | ಃ ಪಿ.ಸಿ, ಜಯಪುರ ಪೋಲೀಸ್ ಠಾಣೆ | **ಪ್ರಾ.ಸಾ.** | ಃ **26** |
| **ವಾಸಸ್ಥಳ** | ಃ ಕೊತ್ತೆಗಾಲ | **ಚಾ.ಸಾ.** | ಃ **29** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ*22.02.2021* ರಿಂದ ನಾನು ಜಯಪುರ ಪೋಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ*21.10.2021* ರಂದು ನನ್ನನ್ನು ಮತ್ತು ಪಿ.ಸಿ- ಮಂಜುನಾಥ್ ಇವರನ್ನು *112* ವಾಹನದ ಕರ್ತವ್ಯಕ್ಕೆ ನೇಮಿಸಿದ್ದರು. ಆ ದಿನ ರಾತ್ರಿ *8* ಗಂಟೆಗೆ ನಾನು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದೆ. ರಾತ್ರಿ *10.15* ರ ಸಮಯದಲ್ಲಿ ಕಂಪ್ಲೇಂಟ್ ಬಂದಿದ್ದ ಕಾರಣ ಕಂಪ್ಲೇಂಟ್ ಬಂದಿದ್ದ ನಂಬರ್ ಗೆ ನಾವು ಕರೆ ಮಾಡಿ ಕೇಳಿದಾಗ ದಡದಹಳ್ಳಿ ರಸ್ತೆ ರೈಲ್ವೇ ಗೇಟ್ ಹತ್ತಿರ ಇರುವ ಮನೆ ಪಕ್ಕದಲ್ಲಿ ಗಲಾಟೆ ಆಗುತ್ತಿದೆ ಬರಬೇಕು ಎಂದು ಯಾರೋ ಸಾರ್ವಜನಿಕರು ಹೇಳಿದ್ದರು. ಆ ಕೂಡಲೇ ನಾವು ಆ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ನಾಗಾರ್ಜುನ ಎನ್ನುವ ಹುಡುಗ, ಅಂಕಲ್ ಮತ್ತು ತಾಯಿಯನ್ನು ಸಾಗರ್ ಕೊಚ್ಚಿ ಹಾಕಿದ್ದಾನೆ ಎಂದು ಹೇಳಿದ್ದ. ಆಗ ನಾವು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ಎರಡು ಶವಗಳು ಬಿದ್ದಿದ್ದವು. ಆ ಶವಗಳು ಶಿವಪ್ರಕಾಶ್

ಮತ್ತು ಲತಾ ಎನ್ನುವವರ ಶವ ಎಂದು ಗೊತ್ತಾಗಿತ್ತು. ನಂತರ ದಕ್ಷಿಣ ಪೋಲೀಸ್ ಠಾಣೆಯ ಅಧಿಕಾರಿಗಳು ಆ ಸ್ಥಳಕ್ಕೆ ಬಂದಿದ್ದರು ಆ ಬಳಿಕ ನಾವು ಅಲ್ಲಿಂದ ಗಸ್ತು ಕರ್ತವ್ಯಕ್ಕೆ ಹೋಗಿದ್ದೆವು. ಈ ಬಗ್ಗೆ ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಸಿ.ಪಿ ರವರಿಂದ:-

2. ಆ ದಿನ ನಾವು ಕರ್ತವ್ಯಕ್ಕೆ ಹೋಗಿದ್ದ ವಾಹನ ಇನ್ನೊವಾ ಕಾರ್ ಇತ್ತು. ಆ ವಾಹನದ ಸಂಖ್ಯೆ ನೆನಪಿಲ್ಲ. ಸಾರ್ವಜನಿಕರು ಕರೆ ಮಾಡಿದರೆ ಮೊದಲಿಗೆ ಕಂಟ್ರೋಲ್ ರೂಮ್ ಗೆ ಕರೆ ಹೊಗುತ್ತದೆ. ಆ ಕಂಪ್ಲೇಂಟ್ ಬಂದಿದ್ದ ಸಂಖ್ಯೆಯನ್ನು ನಾನು ನನ್ನ ಹೇಳಿಕೆ ಕಾಲಕ್ಕೆ ಹೇಳಿಲ್ಲ. ಗಸ್ತು ಕರ್ತವ್ಯದ ಪುಸ್ತಕದಲ್ಲಿ ಆ ನಂಬರ್ ಅನ್ನು ನಮೂದಿಸಿರುತ್ತೇವೆ. ಆ ಪುಸ್ತಕವನ್ನು ಈ ಪ್ರಕರಣದ ತನಿಖಾಧಿಕಾರಿಗೆ ಕೊಟ್ಟಿಲ್ಲ. ಆ ದಿನ ನಾವು ಕಂಪ್ಲೇಂಟ್ ಮಾಡಿದ್ದ ವ್ಯಕ್ತಿಯ ಹೆಸರು ವಿಚಾರಿಸಿರಲಿಲ್ಲ. ಕಂಪ್ಲೇಂಟ್ ಬಂದಾಗ ನಾವು ರಮಾಬಾಯಿನಗರದಲ್ಲಿದ್ದೆವು ಆದರೆ ಆ ಕಾಲಕ್ಕೆ ನಾನು ಹೊಸದಾಗಿ ಆ ಕರ್ತವ್ಯಕ್ಕೆ ನೇಮಕಗೊಂಡಿದ್ದರಿಂದ ರಮಾಬಾಯಿನಗರದ ಯಾವ ರಸ್ತೆಯಲ್ಲಿದ್ದೆವು ಎಂದು ಹೇಳಲು ಆಗುವುದಿಲ್ಲ. ನಮ್ಮ ಠಾಣೆಯ ಅಧಿಕಾರಿಗಳೇ ಆ ದಿನ ನನ್ನನ್ನು ಬೀಟ್ ಗೆ ನೇಮಿಸಿದ್ದರು. ಜಯಪುರ ಪೋಲೀಸ್ ಠಾಣೆಯಿಂದ ಮೈಸೂರು ಸೌತ್ ಪೋಲೀಸ್ ಠಾಣೆಗೆ *15-17* ಕಿ.ಮೀ ಅಂತರ ಇದೆ. ರಮಾಬಾಯಿನಗರದಿಂದ ಶ್ರೀನಗರ *2-3* ಕಿ.ಮೀ ದೂರದಲ್ಲಿದೆ. ಆ ದಿನ ಕಂಪ್ಲೇಂಟ್ ಮಾಡಿದ್ದ ವ್ಯಕ್ತಿ ದಡದಹಳ್ಳಿ ರಸ್ತೆಯಲ್ಲಿರುವ ರೈಲ್ವೇ ಗೇಟ್ ಬಳಿ ಎಂದು ಹೇಳಿದ್ದರಿಂದ ಅಲ್ಲಿಗೆ ಹೋಗಿದ್ದೆವು. ನನ್ನ ಹೇಳಿಕೆ ಕಾಲಕ್ಕೆ ದಡದಹಳ್ಳಿ ರಸ್ತೆಯಲ್ಲಿರುವ ರೈಲ್ವೇ ಗೇಟ್ ಎಂದು ಹೇಳಿದ್ದೇನೆ. ಆ ರೈಲ್ವೇ ಗೇಟ್ ಬಳಿ ಎಷ್ಟು ಮನೆಗಳಿವೆ ಎಂದು ನಾನು ಹೊಸದಾಗಿ ಹೊಗಿರುವುದರಿಂದ ಗೊತ್ತಿಲ್ಲ. ನಾವು ಹೋದಾಗ ಆ ಸ್ಥಳದ ಬಳಿ ಅಂದಾಜು *10* ಜನ

ದೂರದಲ್ಲಿ ನಿಂತಿದ್ದರು. ಆ ಕಾಲಕ್ಕೆ ಅಲ್ಲಿ ಯಾವುದೇ ವಾಹನಗಳು ಇರಲಿಲ್ಲ. *112* ವಾಹನದಲ್ಲಿ ಆಂಬ್ಯುಲೆನ್ಸ್ ಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಆ ದಿನ ನಾವು ಆಂಬ್ಯುಲೆನ್ಸ್ ಕಳುಹಿಸುವಂತೆ ವೈರ್ ಲೆಸ್ ಮೇಸೆಜ್ ಕಳುಹಿಸಿರಲಿಲ್ಲ. ನಾವು ನೋಡಿದಾಗ ನಾಗಾರ್ಜುನ ಅಳುತ್ತಿದ್ದ ಮತ್ತು ಕೈಗೆ ಏಟಾಗಿತ್ತು. ನಾವು ನಾಗಾರ್ಜುನನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ. ನಾನು ಆ ಸ್ಥಳದಲ್ಲಿ ಇರಲಿಲ್ಲವಾದ್ದರಿಂದ ನಾಗಾರ್ಜುನನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆ ಕಾಲಕ್ಕೆ ಶಿವಪ್ರಕಾಶ್ ಎಂದು ಹೆಸರು ಹೇಳಿದ್ದೆ ಆದರೆ ಅದು ತಪ್ಪಾಗಿ ಶಿವಕುಮಾರ್ ಎಂದು ನಮೂದಾಗಿರಬಹುದು. ಹೇಳಿಕೆಯನ್ನು ನಾನು ಓದಿ ಸರಿ ಇದೆ ಎಂದು ಹೇಳಿದ್ದೆ. ಆ ದಿನ ನಾನು ಗಸ್ತು ವಾಹನದ ಕರ್ತವ್ಯಕ್ಕೆ ಹೋಗಿದ್ದೆ ಮತ್ತು ಆ ಸ್ಥಳಕ್ಕೆ ಹೋಗಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೈಸೂರು ಸೌತ್ ಪೋಲೀಸ್ ಠಾಣೆಗೆ ಆ ಘಟನೆ ಬಗ್ಗೆ ಯಾರು ಮಾಹಿತಿ ಕೊಟ್ಟಿದ್ದರು ಎಂದು ಗೊತ್ತಿಲ್ಲ. ಆ ದಿನ ನಾನು ಪೋಲೀಸ್ ಠಾಣೆಗೆ ಫೋನ್ ಮಾಡಿ ತಿಳಿಸಿಲ್ಲ.

**ಮರು ವಿಚಾರಣೆ:-** ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು